# ವೇಷ ಕಳಚಲು ತಕ್ಕ ಸಮಯ



■ ಪ್ರೊ. ಶಿವ ಬಿಲ್ಲವ, ನಾಯ್ಕನಕಟ್ಟೆ

ಲೋನಾವಾಲ ಬಹಳ ಪ್ರಸಿದ್ಧ ಹಿಲ್ ಸ್ಟೇಷನ್ ಮತ್ತು ಪ್ರವಾಸಿ ತಾಣ. ಮುಂಬೈಯಿಂದ ಒಂದು ನೂರು ಕಿ.ಮೀ. ಅಂತರವಿರುವ ಇಲ್ಲಿ ವಾರಾಂತ್ಯದಲ್ಲಿ ಹೆಚ್ಚು ಜನಸಂದಣಿ ಇರುವುದು. ಇಲ್ಲಿನ ರುಚಿಕರವಾದ ನೆಲಗಡಲೆ ಚಿಕ್ಕಿ ಬಾರೀ ಫೇಮಸ್. ನವ ದಂಪತಿಗಳು, ಪ್ರೇಮಿಗಳು, ಶಾಲಾ ಕಾಲೇಜಿನ ತಂಡಗಳು ಆಗಾಗ ಹೋಗುವ ತಾಣವಿದು. ಎಷ್ಟೋ ಜೀವ, ಜೋಡಿಗಳು ಆತ್ಮಹತ್ಯೆ ಮಾಡಿಕೊಳ್ಳುವುದೂ ಇದೆ. ಅದೆಲ್ಲಾ ಇಲ್ಲಿ ಮಾಮೂಲಿ ಅನ್ನೋ ತರಹ. ಅಮೀರಖಾನ್‌ನ 'ಆತಿ... ಕ್ಯಾ... ಕಂಡಾಳಾ...?' ಹಾಡು ಬಹಳ ಫೇಮಸ್ ಆಗಿ, ಪಕ್ಕದ ಕಂಡಾಳಕ್ಕೆ ಬರುವವರ ಸಂಖ್ಯೆ ಹೆಚ್ಚಾಗಿ ಲೋನಾವಾಲದಲ್ಲೂ ಪ್ರವಾಸಿಗರ ದಂಡು. ಆಗ ಎಲ್ಲರ ಬಾಯಲ್ಲೂ ಅದೇ ಹಾಡು.

ಇದೇ ಸಮಯ ಊರು ಬಿಟ್ಟು ಶೌಕತ್ ಲೋನಾವಾಲಗೆ ಬಂದಿದ್ದು. ಶೌಕತ್ ಕಾಮರ್ಸ್ ಡಿಗ್ರಿ ಮುಗಿಸಿದ ಮೇಲೆ ಕೆಲಸ ಹುಡುಕುತ್ತ ಮುಂಬೈಗೆ ಬರಬೇಕಾಯಿತು. ಬಂದವ ಕೆಲಸ ಹುಡುಕುತ್ತಲೇ ಇದ್ದರೂ ಕೆಲಸ ಎಲ್ಲೂ ಸಿಗಲಿಲ್ಲ. ಸರ್ಕಾರಿ ಇಲಾಖೆಯಲ್ಲಿ ಕೆಲಸ ಸಿಗುವುದು ಅಸಾಧ್ಯ. ಮೂರ್ನಾಲ್ಕು ತಿಂಗಳುಗಳ ನಂತರ ಖಾಸಗಿ ಕಂಪನಿಯೊಂದು ಲೋನಾವಾಲದಲ್ಲಿ ವ್ಯಾಕ್ಸ್ ಮ್ಯೂಸಿಯಂ ತೆರೆಯಿತು. ಇಲ್ಲಿ ವಿಶ್ವವಿಖ್ಯಾತ ನಾಮಧೇಯರ ಪ್ರತಿಸೃಷ್ಟಿಯಂತಿರುವ ಮೇಣದ ಮೂರ್ತಿಯನ್ನು ಮಾಡಿ ಪ್ರದರ್ಶನ ಇಡಲಾಗುವುದು. ಹೇಗೋ ಈ ಮ್ಯೂಸಿಯಂನಲ್ಲಿ ಶೌಖತ್ ಕೆಲಸಕ್ಕೆ ಸೇರಿದ. ಕೆಲಸವೆಂದರೆ ಬೆಳಿಗ್ಗೆಯಿಂದ ತಡ ರಾತ್ರಿ ತನಕ ಯಾವುದೇ ಕೆಲಸ ಮಾಡಿದಷ್ಟು ಇರುತಿತ್ತು.

ಒಂದು ದಿನ ಶೌಖತ್‌ನ ದೃಷ್ಟಿ ಹೀಗೇ ಮ್ಯೂಸಿಯಂಗೆ ಬಂದ ವೀಕ್ಷಕರು ಪ್ರತಿಕ್ರಿಯೆ ಬರೆದಿಡುವ ಪುಸ್ತಕದತ್ತ ಹೋಯಿತು. ಹೆಸರಾಂತ ಜನರು ನಾನಾ ರೀತಿಯ ಅನುಭವ ಬರೆದಿದ್ದರು. ಅಚಾನಕ್ ಒಂದು ಕಡೆ ಒಬ್ಬರು, 'ಕೇರಳದ ಮಹಾಸಂತ, ಸಮಾಜ ಸುಧಾರಕ ನಾರಾಯಣ ಗುರುಗಳ ಪ್ರತಿಮೆ ನೋಡಿ ಮಹದಾನಂದವಾಯಿತು' ಅಂತ ಬರೆದಿದ್ದರು. ಶೌಕತ್ ನಾರಾಯಣ ಗುರುಗಳ ಬಗ್ಗೆ ಪತ್ರಿಕೆಗಳಲ್ಲಿ ಓದಿ ಬಲ್ಲ. ಹೆಚ್ಚಿಗೆ ಏನೂ ಗೊತ್ತಿರಲಿಲ್ಲ. ಈಗ ಅವನಿಗೆ ಕುತೂಹಲ ಬೆಳೆಯಿತು. ಗುರುಗಳ ಬಗ್ಗೆ ತಿಳಿದುಕೊಳ್ಳಲು ಇಂಟರ್ನೆಟ್‌ನಲ್ಲಿ ಲೇಖನಗಳನ್ನು ಹುಡಕತೊಡಗಿದ. ಮಾಹಿತಿ ಓದುತ್ತಾ ಹೋದಂತೆ ಅವನಿಗೆ ಗುರುಗಳ ವ್ಯಕ್ತಿತ್ವ, ಸಾಧನೆ, ವರ್ಚಸ್ಸು ಮಹದಾಶ್ಚರ್ಯ ತಂದಿತು. ಇಂತಹ ಮಹಾನ್ ಗುರುಗಳ ತತ್ವವನ್ನು ಪಾಲಿಸಿದರೆ ಖಂಡಿತ ಒಳ್ಳೆಯದು. ಅಂದಿನಿಂದ ಶೌಖತ್ ನಾರಾಯಣ ಗುರುಗಳ ಮೂರ್ತಿಗೆ ವಂದಿಸಿ ತನ್ನ ಕರ್ತವ್ಯ ಶುರು ಮಾಡುತ್ತಿದ್ದ.

ಕೆಲವು ತಿಂಗಳ ನಂತರ ನಳಿನಿ ಎಂಬ ಮಲಯಾಳಿ ಹುಡುಗಿ ಕೆಲಸಕ್ಕೆಂದು ಮ್ಯೂಸಿಯಂಗೆ ಸೇರಿದಳು. ನಿಧಾನವಾಗಿ ನಳಿನಿ ಮತ್ತು ಶೌಖತ್ ನಡುವೆ ಪರಿಚಯ ಬೆಳೆಯುತ್ತಾ ಹೋಯಿತು. ನಳಿನಿಯ ತಾಯಿ ಕೇರಳದಿಂದ ಬಂದವಳು. ನರ್ಸ್ ಆಗಿ ಖಾಸಗಿ ಆಸ್ಪತ್ರೆ ಸೇರಿದಳು. ಶಶಿಕಾಂತ ಭಂಡಾರಿಯೆಂಬ ಮರಾಠಿ ಮನುಷ್ಯನೊಂದಿಗೆ ಪ್ರೀತಿ ಪ್ರೇಮವಾಗಿ ಮದುವೆಯೂ ಆದಳು. ಹಾಗಾಗಿ ನಳಿನಿ ಭಂಡಾರಿ ಆದಳು. ಶೌಖತ್ ಮತ್ತು ನಳಿನಿಯ ಮಾತುಕತೆಗಳು ಸ್ಲೋಮೋಶನ್‌ನಲ್ಲಿ ನಡೆಯುವಂತಿತ್ತು. ಶೌಖತ್‌ಗೆ ನಳಿನಿ ಮೊದಲಿನಿಂದಲೂ ಇಷ್ಟವಾಗುತ್ತಿದ್ದಳು. ಆದರೆ ನಳಿನಿ ಬಹಳ ಪ್ರಾಕ್ಟಿಕಲ್ ಮತ್ತು ಸರಳ ಹುಡುಗಿ, ಯಾವುದೇ ಬಿಂಕ ಬಿನ್ನಾಣವಿಲ್ಲ.

ವರ್ಷ ಕಳೆದರೂ ಮ್ಯೂಸಿಯಂನ ಕೆಲಸದಿಂದ ಅಂತಹ ಸಂಬಳ, ತೃಪ್ತಿ ಕಾಣದೆ ತಾನು ಮುಂಬೈಗೆ ಕೆಲಸ ಹುಡುಕಿ ಹೋಗುತ್ತೇನೆ ಎಂದು ಶೌಖತ್ ಆಗಾಗ ನಳಿನಿ ಹತ್ತಿರ ಹೇಳುತ್ತಿದ್ದನು. ಅಂತೆಯೇ ಶೌಖತನಿಗೆ ತನ್ನ ಊರಿನ ಪರಿಚಯದವರೊಬ್ಬರ ಮೂಲಕ ಮುಂಬಯಿಯಲ್ಲಿ ಕೆಲಸ ಸಿಕ್ಕಿತು. ಆನ್‌ಲೈನ್‌ನಲ್ಲಿ ಸಾಮಾನು ಬುಕ್ ಮಾಡಿದ ಗಿರಾಕಿಗಳಿಗೆ ಡೆಲಿವರಿ ಮಾಡುವ ಕೆಲಸ. ಕಂಪನಿಯವರು ಹೇಳಿದಂತೆ ಒಂದು ವರ್ಷವಾದರೂ ಸಂಬಳದಲ್ಲಿ ಬದಲಾವಣೆ ಮಾಡಲಿಲ್ಲ. ಶೌಖತ್ ಆ ಕಂಪನಿ ಬಿಟ್ಟು ಇನ್ನೊಂದು ಕಂಪನಿಗೆ ಸೇರಿದ. ಅಲ್ಲಿಯೂ ಅದೇ ತರಹ ಡೆಲಿವರಿ ಮಾಡುವ ಕೆಲಸ. ಆದರೆ ಆರಂಭದ ಸಂಬಳ ಹೆಚ್ಚಿತ್ತು.

ಹೊಸ ಕಂಪನಿಯಲ್ಲೂ ನಾನಾ ಕಿರುಕುಳ ಸಹಿಸಲಾಗದೆ ಆತ ಆಹಾರ ಪದಾರ್ಥಗಳನ್ನು ಆ್ಯಪ್ ಮೂಲಕ ಡೆಲಿವರಿ ಮಾಡುವ ಕಂಪನಿಗೆ ಸೇರಿದ. ಆಹಾರ ಪೊಟ್ಟಣಗಳನ್ನು ಆಯಾ ಧರ್ಮದವರಿಗಾಗಿ ಕಾಳಜಿಪೂರ್ಣವಾಗಿ ತಯಾರು ಮಾಡುತ್ತಿದ್ದರು. ವಿಶೇಷವಾಗಿ ಜೈನರಿಗೆ ಇಂಗು, ತೆಂಗು, ಈರುಳ್ಳಿ, ಬೆಳ್ಳುಳ್ಳಿ ಬೆರೆತಿರದ ಆಹಾರ. ಮಾಂಸಹಾರಿಗಳಿಗೆ ಪ್ರತ್ಯೇಕ ಪೊಟ್ಟಣಗಳನ್ನು ಕಂಪನಿ ಡೆಲಿವರಿ ಮಾಡುವುದು.

ಆದರೆ ಒಂದು ದಿನ ಶೌಖತ್ ನಿರೀಕ್ಷಿಸದ ಘಟನೆ ನಡೆಯಿತು. ಕಂಪನಿಯ ಅಭಿವೃದ್ಧಿಯನ್ನು ಸಹಿಸದವರು ಸಂಚನ್ನು ಹೂಡಿದರು. 'ಒಂದು ಸಮುದಾಯದವರ ಧಾರ್ಮಿಕ ಭಾವನೆಗಳನ್ನು ಕಡೆಗಣಿಸಿ ಕಂಪನಿ ದನದ ಮಾಂಸವನ್ನು ಡೆಲಿವರಿ ಮಾಡುತ್ತದೆ' ಎಂದು ಅಪಪ್ರಚಾರ ಮಾಡಲು ರಾಜಕಾರಣ ಮಾಡಲಾಯಿತು. ಶೌಖತ್ ಆ ದಿನ ಒಬ್ಬರ ವೆಜ್ ಆಹಾರವನ್ನು ಅವರ ವಿಳಾಸಕ್ಕೆ ಡೆಲಿವರಿ ಮಾಡಲು ಹೋದ. ಶೌಖತ್ ಎಂಬ ಹೆಸರು ಕೇಳಿದ ಗ್ರಾಹಕ, ತಾನು ಆರ್ಡರ್ ಮಾಡಿದ ಆಹಾರ ಪೊಟ್ಟಣವನ್ನು ತೆಗೆದುಕೊಳ್ಳಲು ನಿರಾಕರಿಸಿದ.

ಮುಸಲ್ಮಾನರನ್ನು ಕೆಲಸದಿಂದ ತೆಗೆಯಬೇಕು ಎಂದು ಧಾರ್ಮಿಕ ಮುಖಂಡರು, ಪುಢಾರಿಗಳೂ ಧ್ವನಿ ಎತ್ತಿದರು. 'ಹಸಿವು ಮತ್ತು ಆಹಾರಕ್ಕೆ ಯಾವುದೇ ಧರ್ಮವಿಲ್ಲ' ಎಂದು ಕಂಪನಿ ಮರು ಉತ್ತರ ನೀಡಿತು. ಇದು ಮರುದಿನ ದೊಡ್ಡ ಸುದ್ದಿ. ಕಂಪನಿಯ ಹಿಂದೆ ಪುಢಾರಿಗಳು ಬಿದ್ದರು. ಈ